All India Radio: Bangalore
National Bulletin In Kannada
22.06.2025 7.35p.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
22.06.2025 7.35 p.m.
<><><><>

ಮುಖ್ಯಾಂಶಗಳು

೧. ಪ್ರಧಾನಿ ನರೇಂದ್ರಮೋದಿ - ಇರಾನ್ ಅಧ್ಯಕ್ಷ ಮಸೂದ್ ಪೆಜೆಷ್ಕಿಯನ್ ಮಾತುಕತೆ ; ಇರಾನ್-ಇಸ್ರೇಲ್ ಉದ್ವಿಗ್ನತೆ ಕುರಿತು ಆತಂಕ

೨. ನಕ್ಸಲಿಸಂ ನಿರ್ಮೂಲನೆಗೆ ಸರ್ಕಾರದ ಸಂಕಲ್ಪ - ಕೇಂದ್ರ ಗೃಹ ಸಚಿವ ಅಮಿತ್ ಶಾ

೩. ಬಾಂಬ್ ಬೆದರಿಕೆ ಹಿನ್ನೆಲೆ ಬರ್ಮಿಂಗ್ ಹ್ಯಾಂ ನಿಂದ ದೆಹಲಿಗೆ ಹೊರಟ ಏರ್ ಇಂಡಿಯಾ ವಿಮಾನ ರಿಯಾದ್ ನಲ್ಲಿ ತುರ್ತು ಭೂ ಸ್ಪರ್ಶ

೪. ಮಧ್ಯಪ್ರಾಚ್ಯದಲ್ಲಿ ವ್ಯಾಪಕ ಯುದ್ಧಭೀತಿ ; ರಾಜತಾಂತ್ರಿಕ ಕ್ರಮಕ್ಕೆ ಜಾಗತಿಕ ನಾಯಕರ ಕರೆ

><><><><><><><

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದು ಇರಾನ್ ಅಧ್ಯಕ್ಷ ಮಸೂದ್ ಪೆಜೆಷ್ಕಿಯನ್ ಅವರೊಂದಿಗೆ ಮಾತನಾಡಿ, ಇರಾನ್ ಮತ್ತು ಇಸ್ರೇಲ್ ನಡುವಿನ ಇತ್ತೀಚಿನ ಉದ್ವಿಗ್ನತೆಗಳ ಕುರಿತು ಗಂಭೀರ ಚಿಂತೆ ವ್ಯಕ್ತಪಡಿಸಿದರು. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ ಪ್ರಧಾನಿ, ಪ್ರಸ್ತುತ ಪರಿಸ್ಥಿತಿಯನ್ನು ವಿವರವಾಗಿ ಚರ್ಚಿಸಿದ್ದು, ತಕ್ಷಣದ ಉದ್ವಿಗ್ನತೆಯ ನಿವಾರಣೆ, ಸಂವಾದ ಮತ್ತು ರಾಜತಾಂತ್ರಿಕ ಚಟುವಟಿಕೆಗಳನ್ನೇ ಮುಂದಿನ ದಾರಿಗಳೆಂದು ಪುನರುಚ್ಚರಿಸಿ, ಪ್ರಾದೇಶಿಕ ಶಾಂತಿ, ಭದ್ರತೆ ಹಾಗೂ ಸ್ಥಿರತೆಯ ಶೀಘ್ರ ಪುನರ್ ಸ್ಥಾಪನೆಯ ಅಗತ್ಯವಿದೆ ಎಂದು ಒತ್ತಾಯಿಸಿದ್ದಾರೆ.

><><><><><><><

ನಾಗರಿಕ ಸಮಾಜದಲ್ಲಿ ಹಿಂಸೆ ಮತ್ತು ಕೆಂಪು ಭಯೋತ್ಪಾದನೆಗೆ ಸ್ಥಾನವಿಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ನಕ್ಸಲಿಸಂ ಅನ್ನು ಬೇರು ಸಹಿತ ಕಿತ್ತೊಗೆಯಲು ಸರ್ಕಾರ ಸಂಕಲ್ಪ ಮಾಡಿದೆ ಮತ್ತು ಅದನ್ನು ಶೀಘ್ರದಲ್ಲೇ ಪೂರೈಸಲಿದೆ ಎಂದು ಅವರು ಹೇಳಿದರು. ನವ ರಾಯ್‌ಪುರದ ಬಂಜಾರಿ ಗ್ರಾಮದಲ್ಲಿ ರಾಷ್ಟ್ರೀಯ ವಿಧಿವಿಜ್ಞಾನ ವಿಶ್ವವಿದ್ಯಾಲಯ ಮತ್ತು ಕೇಂದ್ರ ವಿಧಿವಿಜ್ಞಾನ ಪ್ರಯೋಗಾಲಯದ ಕಟ್ಟಡಗಳ ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸಿದ ನಂತರ ನಡೆದ ಸಮಾರಂಭದಲ್ಲಿ ಅವರು ಮಾತನಾಡಿದರು. ಈ ಎರಡೂ ರಾಷ್ಟ್ರೀಯ ಸಂಸ್ಥೆಗಳನ್ನು ಸುಮಾರು ೪೦ ಎಕರೆ ಪ್ರದೇಶದಲ್ಲಿ ನೂರು ಕೋಟಿ ರೂಪಾಯಿ ವೆಚ್ಚದಲ್ಲಿ ಈ ಪ್ರಯೋಗಾಲಯ ನಿರ್ಮಾಣವಾಗಲಿದೆ. ಛತ್ತೀಸ್‌ಗಢದಲ್ಲಿ ಅಪರಾಧ ನ್ಯಾಯ

ವ್ಯವಸ್ಥೆಯನ್ನು ಆಧುನೀಕರಿಸಲು ಈ ಹೊಸ ಉಪಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಸಚಿವರು ಹೇಳಿದರು. ಈ ಉಪಕ್ರಮಗಳು ಮುಂದಿನ ದಿನಗಳಲ್ಲಿ ಛತ್ತೀಸ್‌ಗಢ ಮಾತ್ರವಲ್ಲದೆ ಇಡೀ ಮಧ್ಯ ಭಾರತದ ಅಪರಾಧ ನ್ಯಾಯ ವ್ಯವಸ್ಥೆಗೆ ಒಂದು ಅಡಿಪಾಯವನ್ನು ಒದಗಿಸುತ್ತವೆ ಎಂದು ಅವರು ಪ್ರತಿಪಾದಿಸಿದರು. ಮುಂದಿನ ವರ್ಷದ ಮಾರ್ಚ್ ವೇಳೆಗೆ ನಕ್ಸಲಿಸಂ ಅನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಸಂಕಲ್ಪವನ್ನು ಕೇಂದ್ರ ಗೃಹ ಸಚಿವರು ಪುನರುಚ್ಚರಿಸಿದರು ಮತ್ತು ಛತ್ತೀಸ್‌ಗಢ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಭದ್ರತಾ ಪಡೆಗಳು ಅಭಿಯಾನಗಳನ್ನು ನಡೆಸುವ ರೀತಿಯಲ್ಲಿ, ಶೀಘ್ರದಲ್ಲೇ ಗುರಿಯನ್ನು ಸಾಧಿಸಲಾಗುವುದು ಎಂದು ತಿಳಿಸಿದದರು. ಛತ್ತೀಸ್‌ಗಢ ಸರ್ಕಾರವು ಉತ್ತಮ ಶರಣಾಗತಿ ನೀತಿಯನ್ನು ಮಾಡಿದೆ ಎಂದು ಕೇಂದ್ರ ಸಚಿವರು ಹೇಳಿದರು. ಈ ನೀತಿಯ ಲಾಭವನ್ನು ಪಡೆದು ತಮ್ಮ ಶಸ್ತ್ರಾಸ್ತ್ರಗಳನ್ನು ಒಪ್ಪಿಸಿ ಹೊಸ ಛತ್ತೀಸ್‌ಗಢ ನಿರ್ಮಾಣದಲ್ಲಿ ಭಾಗವಹಿಸುವಂತೆ ಅವರು ಮಾವೋವಾದಿಗಳಿಗೆ ಮನವಿ ಮಾಡಿದರು.

ಧ್ವನಿ : ಅಮಿತ್ ಶಾ , ಕೇಂದ್ರ ಗೃಹ ಸಚಿವ ( ೨೮ ಸೆಕೆಂಡ್‌ಗಳು )

><><><><><><<><><

ಬರ್ಮಿಂಗ್‌ಹ್ಯಾಮ್ ನಿಂದ ದೆಹಲಿಗೆ ಹೊರಟ ಏರ್ ಇಂಡಿಯಾ ವಿಮಾನವನ್ನು ಬಾಂಬ್ ಬೆದರಿಕೆ ಹಿನ್ನೆಲೆಯಲ್ಲಿ ರಿಯಾಧ್‌ಗೆ ತಿರುಗಿಸಿ ತುರ್ತು ಭೂ ಸ್ಪರ್ಶ ಮಾಡಲಾಯಿತು. ಬರ್ಮಿಂಗ್‌ಹ್ಯಾಮ್ ನಿಂದ ದೆಹಲಿ ಕಡೆಗೆ ಹೊರಟ ಏರ್ ಇಂಡಿಯಾ ವಿಮಾನವನ್ನು ಕಳೆದ ರಾತ್ರಿ ಬಾಂಬ್ ಬೆದರಿಕೆಯ ಹಿನ್ನೆಲೆಯಲ್ಲಿ ರಿಯಾಧ್‌ಗೆ ತುರ್ತು ತಿರುಗಿ ಸಲಾಗಿತ್ತು. ಏರ್ ಇಂಡಿಯಾ ಸಂಸ್ಥೆಯು ಇಂದು ಈ ಮಾಹಿತಿಯನ್ನು ದೃಢಪಡಿಸಿದೆ. ಎಐ೧೧೪ ವಿಮಾನವು ರಿಯಾಧ್‌ನಲ್ಲಿ ಸುರಕ್ಷಿತವಾಗಿ ಇಳಿದಿದ್ದು, ಸ್ಥಳದಲ್ಲಿ ಭದ್ರತಾ ಪರಿಶೀಲನೆಗಳು ನಡೆಸಲಾಯಿತು. ಫ್ಲೈಟ್ ರಾಡಾರ್ ೨೪ ಎಂಬ ವಿಮಾನ ನಿಗಾವಹಿಸುವ ವೆಬ್‌ಸೈಟ್ ಪ್ರಕಾರ, ಈ ವಿಮಾನವು ರಾತ್ರಿ ೮:೨೬ಕ್ಕೆ ಬರ್ಮಿಂಗ್‌ಹ್ಯಾಮ್‌ನಿಂದ ಉಡ್ಡಯನಗೊಂಡಿತ್ತು ಹಾಗೂ ದೆಹಲಿ ಕಡೆಗೆ ಹೊರಟಿದ್ದ ಸಂದರ್ಭದಲ್ಲಿ ತುರ್ತು ಭೂಸ್ಪರ್ಶಕ್ಕೆ ನಿರ್ಧರಿಸಲಾಯಿತು. ನಂತರ, ಟಾಟಾ ಗುಂಪು ಒಡೆಯತನದ ಏರ್ ಇಂಡಿಯಾ ಸಂಸ್ಥೆ ಪ್ರಕಟಣೆ ನೀಡಿ ಎಲ್ಲಾ ಪ್ರಯಾಣಿಕರೂ ಸುರಕ್ಷಿತರಾಗಿದ್ದಾರೆ ಎಂದು ತಿಳಿಸಿದೆ. ಪ್ರಯಾಣಿಕರನ್ನು ಗಮ್ಯಸ್ಥಾನಗಳಿಗೆ ತಲುಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಂಸ್ಥೆ ಸ್ಪಷ್ಟಪಡಿಸಿದೆ. ಸೇವಾ, ಸುಶಾಸನ್ ಮತ್ತು ಗರೀಬ್ ಕಲ್ಯಾಣ್ ತತ್ವಗಳಿಂದ ನಡೆಸಲ್ಪಡುವ ಭಾರತವು ಒಂದು ದಶಕದ ಗಮನಾರ್ಹ ಪರಿವರ್ತನೆಗೆ ಒಳಗಾಗಿದೆ. ಕಳೆದ ೧೧ ವರ್ಷಗಳಲ್ಲಿ ಪ್ರಮುಖ ವಲಯಗಳಲ್ಲಿ ಸರ್ಕಾರದ ಪ್ರಯತ್ನಗಳ ಕುರಿತು ಆಕಾಶವಾಣಿ ಸುದ್ದಿ ವಿಭಾಗ ವಿಶೇಷ ಸರಣಿಯ ಕಾರ್ಯಕ್ರಮ ಪ್ರಸಾರಮಾಡುತ್ತಿದೆ.  ಇಂದು, ನಾವು ಭಾರತದ ಇಂಧನ ಕ್ರಾಂತಿಯ ಮೇಲೆ ಕೇಂದ್ರೀಕರಿಸುತ್ತೇವೆ - ದಾಖಲೆಯ ಸಾಮರ್ಥ್ಯ ಸೇರ್ಪಡೆಗಳು ಮತ್ತು ಶುದ್ಧ, ವಿಶ್ವಾಸಾರ್ಹ ಹಾಗೂ ಅಂತರ್ಗತ ವಿದ್ಯುತ್‌ಗಾಗಿ ಬಲವಾದ ಪ್ರಚೋದನೆ ಇವು ಒಂದು ದಶಕದ ದಿಟ್ಟ ಸುಧಾರಣೆಗಳು.

(ಡೆಸ್ಕ್ ರಿಪೋರ್ಟ್ - ಕುಮಾರಿ ಕೆ. ೧.೪೩ ಸೆಕೆಂಡ್ ಗಳು)

ಕಳೆದ ದಶಕದಲ್ಲಿ, ಹೆಚ್ಚುತ್ತಿರುವ ಬೇಡಿಕೆ, ಪ್ರಮುಖ ಮೂಲಸೌಕರ್ಯ ಅಭಿವೃದ್ಧಿ ಮತ್ತು ಸಾಂಪ್ರದಾಯಿಕ ಹಾಗೂ ನವೀಕರಿಸಬಹುದಾದ ಇಂಧನ ಮೂಲಗಳಿಗೆ ಪರಿಣಾಮಕಾರಿ ನೀತಿಯ ಬೆಂಬಲದಿಂದಾಗಿ ಭಾರತದ

ವಿದ್ಯುತ್ ವಲಯವು ತೀವ್ರ ಬೆಳವಣಿಗೆಯನ್ನು ಕಂಡಿದೆ. ಜೂನ್ ೨೦೨೫ ರ ಹೊತ್ತಿಗೆ, ದೇಶದ ಒಟ್ಟು ಸ್ಥಾಪಿತ ವಿದ್ಯುತ್ ಸಾಮರ್ಥ್ಯವು ೪೭೬ ಗಿಗಾವ್ಯಾಟ್‌ಗಳನ್ನು ತಲುಪಿದೆ. ಅದರಲ್ಲಿ ಸುಮಾರು ಅರ್ಧದಷ್ಟು ಪಳೆಯುಳಿಕೆಯೇತರ ಇಂಧನ ಮೂಲಗಳಿಂದ ಬಂದಿದೆ. ನವೀಕರಿಸಬಹುದಾದ ಇಂಧನ ಮೂಲಗಳಿಂದ ಮಾತ್ರ ೨೨೬ ಗಿಗಾವ್ಯಾಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿದ್ದು, ಭಾರತವು ಸೌರಶಕ್ತಿಯಲ್ಲಿ ಜಾಗತಿಕವಾಗಿ ಮೂರನೇ ಸ್ಥಾನದಲ್ಲಿದೆ ಮತ್ತು ಪವನಶಕ್ತಿ ಸಾಮರ್ಥ್ಯದಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಏಪ್ರಿಲ್ ೨೦೧೮ ರ ವೇಳೆಗೆ ದೇಶವು ಶೇಕಡಾ ೧೦೦ ರಷ್ಟು ಹಳ್ಳಿಗಳ ವಿದ್ಯುದ್ದೀಕರಣವನ್ನು ಸಾಧಿಸಿದೆ ಮತ್ತು ಅಂದಿನಿಂದ ೨.೮ ಕೋಟಿಗೂ ಹೆಚ್ಚು ಮನೆಗಳನ್ನು ಗ್ರಿಡ್‌ಗೆ ಸಂಪರ್ಕಿಸಿದೆ. ವಿದ್ಯುತ್ ಕೊರತೆ ನಾಟಕೀಯವಾಗಿ ಕಡಿಮೆಯಾಗಿದೆ, ೨೦೧೪ ರಲ್ಲಿ ಶೇಕಡಾ ೪ ಕ್ಕಿಂತ ಹೆಚ್ಚಾಗಿದ್ದು ಇಂದು ಕೇವಲ ಶೇಕಡಾ ೦.೧ ಕ್ಕೆ ಇಳಿದಿದೆ, ಆದರೆ ತಲಾ ವಿದ್ಯುತ್ ಬಳಕೆ ಶೇಕಡಾ ೪೫ ರಷ್ಟು ಹೆಚ್ಚಾಗಿದೆ. ಪಿಎಂ-ಸೂರ್ಯ ಘರ್ ಯೋಜನೆ ದೇಶಾದ್ಯಂತ ಮನೆಗಳನ್ನು ಬೆಳಗಿಸುತ್ತಿದೆ, ಅದೇ ಹೊತ್ತಿಗೆ ಪಿಎಂ-ಕುಸುಮ್ ಯೋಜನೆಯು ರೈತರಿಗೆ ಸೌರಶಕ್ತಿ ಚಾಲಿತ ನೀರಾವರಿಯನ್ನು ಒದಗಿಸುತ್ತಿದೆ. ಪವನಶಕ್ತಿ ವಲಯವು ದ್ವಿಗುಣಗೊಂಡಿದೆ ಮತ್ತು ಜಲವಿದ್ಯುತ್, ಜೈವಿಕ ಮತ್ತು ಪರಮಾಣು ಶಕ್ತಿಯ ಸಾಮರ್ಥ್ಯಗಳು ಸ್ಥಿರವಾಗಿ ಬೆಳೆಯುತ್ತಲೇ ಇವೆ. ಅದೇ ಸಮಯದಲ್ಲಿ, ಭಾರತದ ಕಲ್ಲಿದ್ದಲು ವಲಯವನ್ನು ಸ್ವಾವಲಂಬನೆ ಮತ್ತು ಸುಸ್ಥಿರತೆಯನ್ನು ಹೆಚ್ಚಿಸಲು, ದಾಖಲೆಯ ಉತ್ಪಾದನಾ ಮಟ್ಟವನ್ನು ಸಾಧಿಸಲು ಮತ್ತು ಆಮದು ಅವಲಂಬನೆಯನ್ನು ಗಮನಾರ್ಹವಾಗಿ ಕಡಿಮೆ ಮಾಡಲು ಆಧುನೀಕರಿಸಲಾಗಿದೆ. ರಾಷ್ಟ್ರೀಯ ಹಸಿರು ಹೈಡ್ರೋಜನ್ ಮಿಷನ್‌ನಿಂದ ಹಿಡಿದು ಅಂತಾರಾಷ್ಟ್ರೀಯ ಸೌರ ಒಕ್ಕೂಟದವರೆಗೆ, ಭಾರತವು ತನ್ನ ಇಂಧನ ಅಗತ್ಯಗಳನ್ನು ಪೂರೈಸುವುದಲ್ಲದೆ, ಸ್ವಚ್ಛ, ಹಸಿರು ಭವಿಷ್ಯದತ್ತ ಕೊಂಡೊಯ್ಯುತ್ತಿದೆ.

><><><><><><<><><

ಅಮೆರಿಕ ಸೇನೆ ಇರಾನ್‌ನ ಪರಮಾಣು ಸೌಲಭ್ಯಗಳ ಮೇಲೆ ನಡೆಸಿದ ದಾಳಿಗಳು ಜಾಗತಿಕ ಮಟ್ಟದಲ್ಲಿ ತೀವ್ರ ಪ್ರತಿಕ್ರಿಯೆಗಳಿಗೆ ಕಾರಣವಾಗಿದ್ದು, ಮಧ್ಯಪ್ರಾಚ್ಯ ಪ್ರದೇಶಗಳಲ್ಲಿ ವ್ಯಾಪಕ ಯುದ್ಧ ಭೀತಿ ಎದುರಾಗುವ ಆತಂಕದ ನಡುವೆ ರಾಜತಾಂತ್ರಿಕ ಚಟುವಟಿಕೆಗೆ ಹಿಂದಿರುಗುವಂತೆ ಜಾಗತಿಕ ನಾಯಕರು ಕರೆ ನೀಡಿದ್ದಾರೆ. ಬ್ರಿಟನ್ ಪ್ರಧಾನಮಂತ್ರಿ ಕಿಯರ್ ಸ್ಟಾರ್ಮರ್, ಅಮೆರಿಕದ ಕ್ರಮಕ್ಕೆ ಬೆಂಬಲ ವ್ಯಕ್ತಪಡಿಸಿ, ಪ್ರಾದೇಶಿಕ ಸ್ಥಿರತೆಗೆ ಆದ್ಯತೆ ನೀಡಿದರು. ಬ್ರಿಟನ್ ಪೂರ್ವ ಪ್ರಧಾನಿ ರಿಷಿ ಸುನಕ್ ಈ ಆತಂಕಗಳನ್ನು ಹಂಚಿಕೊಂಡು ದಾಳಿಗಳಿಗೆ ಬೆಂಬಲ ಸೂಚಿಸಿದರು. ಬ್ರಿಟನ್‌ನ ರಕ್ಷಣಾ ಕಾರ್ಯದರ್ಶಿ ಜಾನ್‌ಹೀಲೀ ಅವರು ಬ್ರಿಟನ್ ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿಲ್ಲ ಎಂದು ಸ್ಪಷ್ಟ ಪಡಿಸಿದ್ದಾರೆ. ಆಸ್ಟ್ರೇಲಿಯಾ, ತನ್ನ ರಾಯಭಾರಿಗಳನ್ನು ಹಿಂದಕ್ಕೆ ಕರೆದುಕೊಂಡು, ತಹೆರಾನ್‌ನ ದೂತಾವಾಸವನ್ನು ಮುಚ್ಚಿದ ನಂತರ ರಾಜತಾಂತ್ರಿಕ ದಾರಿಯ ಕಡೆಗೆ ಒತ್ತಾಯ ಮುಂದುವರಿಸಿದೆ. ಖತಾರ್ ವಿದೇಶಾಂಗ ಸಚಿವಾಲಯ, ಈ ಬೆಳವಣಿಗೆ ಭಯಾನಕ ಪರಿಣಾಮಗಳನ್ನುಂಟು ಮಾಡಬಹುದು ಎಂದು ಎಚ್ಚರಿಸಿದೆ. ಓಮಾನ್ ವಿದೇಶಾಂಗ ಸಚಿವಾಲಯ ಅಮೆರಿಕ ದಾಳಿಗಳನ್ನು ತೀವ್ರವಾಗಿ ಖಂಡಿಸಿ, ಇವು ಅಂತಾರಾಷ್ಟ್ರೀಯ ಕಾನೂನು ಮತ್ತು ಯುಎನ್ ಚಾರ್ಟರ್ ಉಲ್ಲಂಘನೆ ಎಂದಿದೆ. ಐರ್ಲೆಂಡ್ ಉಪಪ್ರಧಾನಿ ಸೈಮನ್ ಹ್ಯಾರಿಸ್, 'ಅತ್ಯಂತ ಅಪಾಯದ ಮಟ್ಟಕ್ಕೆ ತಲುಪುತ್ತಿರುವ ಈ ಪರಿಸ್ಥಿತಿಯನ್ನು ತಡೆಯಬೇಕಾಗಿದೆ" ಎಂದು ಎಚ್ಚರಿಸಿದರು.

ಬೆಲ್ಜಿಯಂ ಉಪಪ್ರಧಾನಿ ಮ್ಯಾಕ್ಸಿಮ್ ಪ್ರೇವೋ, ‘ಇರಾನ್‌ನ ಥಿಯೋಕ್ರಟಿಕ್ ಆಳ್ವಿಕೆ ಪರಮಾಣು ಅಸ್ತ್ರಗಳನ್ನು ಅಭಿವೃದ್ಧಿಪಡಿಸಬಾರದು" ಎಂದರು.

><><><><><><<><><

ಲಡಾಖ್‌ನ, ಕಾರ್ಗಿಲ್ ಯುದ್ಧ ಸ್ಮಾರಕದ ಡ್ರಾಸ್‌ನಲ್ಲಿ ಇಂದು ಸರಹದ್ ಶೌರ್ಯಥಾನ್ ೨೦೨೫ ಮ್ಯಾರಥಾನ್ ನಡೆಯಿತು. ದೇಶಾದ್ಯಂತದಿಂದ ೨ ಸಾವಿರದ ೫೦೦ ಕ್ಕೂ ಹೆಚ್ಚು ಕ್ರೀಡಾಪಟುಗಳು ಉತ್ಸಾಹಭರಿತವಾಗಿ ಪಾಲ್ಗೊಂಡು ಈ ಕಾರ್ಯಕ್ರಮಕ್ಕೆ ಸಾಕ್ಷಿಯಾದರು. ಈ ಕಾರ್ಯಕ್ರಮವನ್ನು ಭಾರತೀಯ ಸೇನೆಯು ಪುಣೆಯ ಸರಹದ್ ಫೌಂಡೇಶನ್ ಹಾಗೂ ಕಾರ್ಗಿಲ್‌ನ ಸ್ಥಳೀಯ ನಾಗರಿಕ ಆಡಳಿತದ ಸಹಯೋಗದಲ್ಲಿ ಆಯೋಜಿಸಲಾಗಿತ್ತು. ಮ್ಯಾರಥಾನ್‌ಗೆ ಮಹಾರಾಷ್ಟ್ರದ ಮಾನ್ಯ ಉಪಮುಖ್ಯಮಂತ್ರಿ ಏಕನಾಥ್ ಶಿಂದೆ, ಎಲ್‌ಎಎಚ್‌ಡಿಸಿ ಕಾರ್ಗಿಲ್‌ನ ಮುಖ್ಯ ಕಾರ್ಯನಿರ್ವಾಹಕ ಮಂಡಳಿಯ ಸದಸ್ಯ ಡಾ. ಮೊಹಮ್ಮದ್ ಜಾಫರ್ ಅಖೂನ್, ಹಾಗೂ ೧೪ನೇ ಕಾರ್ಪ್ಸ್‌ನ ಜನರಲ್ ಆಫೀಸರ್ ಕಮಾಂಡಿಂಗ್ ಲೆಫ್ಟಿನೆಂಟ್ ಜನರಲ್ ರಿತೇಶ್ ಭಲ್ಲಾ ಅವರು ಚಾಲನೆ ನೀಡಿದರು.

><><><><><><<><><